**ದಿನಾಂಕಃ 04-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಬಿ.ಕೆ., ಆರೋಪಿ ಪರ ವಕೀಲರಿಂದಃ**

3. ನಾನು ಆರೋಪಿಯನ್ನು ಹೊರತು ಪಡಿಸಿ ಬೇರೆಯವರಿಗೆ ಮೀನು ಮತ್ತು ಕೋಳಿ ಮಾರಾಟ ಮಾಡಿರುತ್ತೇನೆ. ಸದ್ರಿಯವರುಗಳಿಗೆ ಎಷ್ಟು ಮೀನು ಮತ್ತು ಕೋಳಿಗಳನ್ನು ಕೊಟ್ಟಿರುತ್ತೇನೆ ಎನ್ನುವ ಬಗ್ಗೆ ಲೆಕ್ಕ-ಪತ್ರ ಬರೆದಿಟ್ಟಿಲ್ಲ. ಒಂದು ದಿನಕ್ಕೆ 50 ರಿಂದ 60 ಜನರಿಗೆ ಮೀನು ಮತ್ತು ಕೋಳಿಗಳನ್ನು ಮಾರಾಟ ಮಾಡುತ್ತಿದ್ದೆ. ಸದ್ರಿಯವರುಗಳಿಗೆ ಮಾರಾಟ ಮಾಡಿದ ಬಗ್ಗೆ ಲೆಕ್ಕ ಬರೆದಿಟ್ಟಿಲ್ಲ. ಹೋಲ್‌ಸೇಲ್ ವ್ಯಾಪಾರ ಮಾಡಲು ಕೋಳಿ ಮತ್ತು ಮೀನುಗಳನ್ನು ಕಳುಹಿಸಿಕೊಡುವವರು ನಾನು ಹಣ ಪಾವತಿ ಮಾಡಿದ ಬಗ್ಗೆ ಬಿಲ್ ಕೊಡುತ್ತಾರೆ ಎಂದರೆ ಸಾಕ್ಷಿಯು ಕಚ್ಚಾಬಿಲ್ ಕೊಡುತ್ತಾರೆ ಎಂದು ನುಡಿಯುತ್ತಾರೆ. ಆಗಿನ ಕಚ್ಚಾಬಿಲ್‌ಗಳು ನನ್ನ ಬಳಿ ಇಲ್ಲ ಈಗಿನ ಬಿಲ್‌ಗಳು ಮಾತ್ರ ಇವೆ. ನಿಮ್ಮ ಅಂಗಡಿಯ ಲೆಕ್ಕ-ಪತ್ರದ ಕುರಿತು ಅಡಿಟ್ ಮಾಡಿಸುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಯಾವುದು ಲೆಕ್ಕ ಪತ್ರ ಇಟ್ಟಿಲ್ಲ ಎಂದು ನುಡಿಯುತ್ತಾರೆ.

4. ಆರೋಪಿಯು ಚೆಕ್‌ನಲ್ಲಿ ನಮೂದಿಸಿರುವ ಹಣವನ್ನು ಕೊಡಲು ಬಾಕಿ ಇತ್ತು ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿಗೆ ಕಚ್ಚಾ ಬಿಲ್‌ನಲ್ಲಿ ಬರೆದುಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಆರೋಪಿಗೆ ಬರೆದುಕೊಟ್ಟಂತಹ ಕಚ್ಚಾಬಿಲ್ ನನ್ನ ಬಳಿ ಇಟ್ಟುಕೊಂಡಿಲ್ಲ, ಬಾಯಿ ಮಾತಿನಿಂದ ಹೇಳಿ ಆತನಿಗೆ ಬರೆದುಕೊಟ್ಟಿದ್ದೆ. ಆರೋಪಿಗೆ ಯಾವ ದಿನಗಳಂದು ಎಷ್ಟೆಷ್ಟು ಮೀನು ಮತ್ತು ಕೋಳಿ ಮಾಂಸಗಳನ್ನು ಕೊಟ್ಟಿರುತ್ತೇನೆ ಎನ್ನುವ ಬಗ್ಗೆ ಬರೆದಿಟ್ಟಿಲ್ಲ.

5. ಆರೋಪಿಗೆ ನಾನು ವಕೀಲರ ಮೂಲಕ ನೋಟಿಸನ್ನು ಕೊಟ್ಟ ನಂತರ ಆರೋಪಿಯು ನನ್ನ ಬಳಿ ಬಂದು ಕೇಳಿದಾಗ ನಾನು ಪ್ರಕರಣವನ್ನು ದಾಖಲು ಮಾಡುವುದಿಲ್ಲ ಹೆದರಿಸಲೆಂದಷ್ಟೇ ನೋಟಿಸ ಕೊಟ್ಟಿದ್ದೇನೆ ಎಂದು ಹೇಳಿದ್ದೆ, ಆದ್ದರಿಂದ ಆರೋಪಿಯು ಪ್ರತ್ಯುತ್ತರ ನೀಡಿಲ್ಲ ಎಂದರೆ ಸಾಕ್ಷಿಯು ಇಲ್ಲ ಆರೋಪಿಯು ನನ್ನ ಬಳಿ ಬಂದು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದ್ದರಿಂದ ಪ್ರಕರಣ ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಲು ಬಾಕಿ ಇರುವುದಿಲ್ಲ, ಆತನಿಗೆ ಹೆದರಿಸಿ–ಬೆದರಿಸಿ ಆತನಿಂದ ಚೆಕ್‌ಪಡೆದು ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ನನಗೆ ಯಾವುದೇ ಹಣ ಬರುವುದು ಇಲ್ಲ, ಆದರೂ ಸಹ ಆತನ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

–ಸಹಿ–

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.

C.C. 1462/2023
ಪಿಡಬ್ಲ್ಯೂ-1